**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ,ಎಫ್ . ಟಿ. ಎಸ್. ಸಿ.–1,**
**ಹಾವೇರಿ .**

**ಎಸ್.ಸಿ. ನಂ. 13/2024**

**PW**–11

**CW**–02

ಸಾಕ್ಷಿದಾರರ ಹೆಸರು : ಶ್ರೀ ಮಹದೇವಪ್ಪ ಗುತ್ತೆಪ್ಪ ಓಲೇಕಾರ

ತಂದೆ ಹೆಸರು : ಶ್ರೀ ಗುತ್ತೆಪ್ಪ

ವಯಸ್ಸು : 50 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಗೆಜ್ಜಿಹಳ್ಳಿ

**ದಿನಾಂಕಃ 02.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ–3 ಸಂತೋಷ ನನಗೆ ಗೊತ್ತು. ನನ್ನನ್ನು ಅವರನ್ನು ಯಾರು ಎಲ್ಲಿಯೂ ಕರೆಸಿಲ್ಲ. ನಮ್ಮ ಸಮಕ್ಷಮ ಏನೂ ಮಾಡಿಲ್ಲ. ಪೋಲಿಸರು 5 ವರ್ಷದ ಹಿಂದೆ ನನ್ನ ಹಾಗೂ ಚಾಸಾ–3 ಸಂತೋಷನನ್ನು ಗೆಜ್ಜಿಹಳ್ಳಿಯ ದ್ಯಾಮವ್ವನ ದೇವಸ್ಥಾನದ ಹತ್ತಿರ ಇರುವ ಮಣ್ಣಿನ ರಸ್ತೆಯನ್ನು ಪರಿಶೀಲಿಸಿದರು. ಸದರಿ ರಸ್ತೆಯ ಪಕ್ಕದಲ್ಲಿ ಫ್ರಾಸಾ–1 ಜಗದೀಶ ರವರ ಮನೆ ಇರುತ್ತದೆ.

2. ಫ್ರಾಸಾ–1 ಜಗದೀಶನ ಜೊತೆ ಅವರ ಊರಿನವರು ಆ ರಸ್ತೆಯ ಮೇಲೆ ಜಗಳ ಮಾಡಿದ ಕಾರಣ ಸದರಿ ರಸ್ತೆಯ ಮೇಲೆ ಪೋಲಿಸರು ಪರೀಶಿಲಿಸಿದರು ಮತ್ತು ಜಗಳ ಆದ ಬಗ್ಗೆ ಬರೆಸಿಕೊಂಡರು ಹಾಗೂ ನಮ್ಮ ಸಹಿಯನ್ನು ಹಾಕಿಸಿಕೊಂಡರು. ಸದರಿ ಬರವಣಿಗೆಯನ್ನು ಮದ್ಯಾಹ್ನ 12.00 – 1.15 ವರೆಗೆ ಮಾಡಿದರು.

3. ನಾನು ಈಗ ಸದರಿ ದಾಖಲೆಯನ್ನು ನೋಡುತ್ತಿದ್ದು ಅದರ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ಈಗಾಗಲೆ ನಿಪಿ-6 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಬರವಣಿಗೆ ಮಾಡಿದ ತಿಂಗಳು ಮಾರ್ಚ ಇದ್ದು , 24 ನೇ ತಾರೀಖು , 2022 ಆಗಿತ್ತು.

4. ಅಲ್ಲಿ ಕೆಂಪು ಬಣ್ಣದ ಬೈಕ ಇತ್ತು. ಅದು ಗಲಾಟೆ ಮಾಡಿದವರ ಬೈಕ ಎಂದು ಪೋಲಿಸರು ಅದನ್ನು ಅಮಾನತ್ತು ಪಡಿಸಿಕೊಂಡರು. ಬೈಕನ ಬ್ಯಾಗನಲ್ಲಿ ಚಾಕು ಇದ್ದು ಅದನ್ನೂ ಸಹ ಪೋಲಿಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಚಾಕುವನ್ನು ನಾನು ಈಗ ನೋಡಿದರೆ ಗುರುತಿಸುತ್ತೇನೆ. ಸದರಿ ಚಾಕುವನ್ನು ನಾನು ಈಗ ನೋಡುತ್ತಿದ್ದು ಅದನ್ನು ಗುರುತಿಸುತ್ತೇನೆ. ಸದರಿ ಚಾಕುವನ್ನು ಈಗಾಗಲೆ ಮುಮಾ –1 ಎಂದು ಗುರುತಿಸಲಾಗಿದೆ.

5. ಸದರಿ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಾಹನದ ಪೊಟೊವನ್ನು ನಾನು ಈಗ ನೋಡುತ್ತಿದ್ದು ನಾನು ವಾಹನವನ್ನು ಗುರುತಿಸುತ್ತೇನೆ. ಸದರಿ ವಾಹನದ ಪೊಟೊಗಳನ್ನು ಈಗಾಗಲೆ ನಿಪಿ–3 ರಿಂದ 5 ಎಂದು ಗುರುತಿಸಲಾಗಿದೆ.

( **ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೇಳಿದ್ದು, ಸಾಕ್ಷಿಯು ನ್ಯಾಯಾಲಯದ ಮುಂದೆ ಹೇಳಿದ ಸಾಕ್ಷಿ ಹಾಗೂ ಅವರ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**).

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

6. ಆ ದಿನ ಪಂಚನಾಮೆಯ ಸಮಯದಲ್ಲಿ ಪ್ರಾಸಾ-2 ಮಹಾಂತೇಶ ಘಟನಾ ಸ್ಥಳವನ್ನು ತೋರಿಸಿ , ಆರೋಪಿತರು ಜಗದೀಶನ ಮೇಲೆ ಹಲ್ಲೆ ಮಾಡಿದ ಸ್ಥಳ ಇದೇ ಎಂದು ಹೇಳಿದರು ಎಂದರೆ ಸರಿ.

7. ಜಗದೀಶನ ಮೇಲೆ ಆರೋಪಿತರು ಹಲ್ಲೆ ಮಾಡಲು ಬಳಸಿದ ಚಾಕು ಇದೇ ಎಂದು ಮಹಾಂತೇಶ ತೋರಿಸಿದ ಎಂದರೆ ಸರಿ. ಅದನ್ನು ಪೋಲಿಸರು ಆದ್ದರಿಂದ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿ .

8. ಸದರಿ ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಮೇಲೆ ಆರೋಪಿತರು ಜಗಳ ಮಾಡಿದ್ದರು ಎಂದರೆ ಸರಿ.

<u>ಪಾಟೀ ಸವಾಲುಃ ಆರೋಪಿ ವಕೀಲರಾದ ಶ್ರೀ ಎಸ್‌ಜಿಹೆಚ್ ಅವರಿಂದಃ</u>

9. ನಾನು ದಿಃ 24.03.2022 ರಂದು ದೇವಸ್ಥಾನಕ್ಕೆ ಹೋಗಿದ್ದೆ.

10. ಪೋಲಿಸರು ಹೇಳಿದ್ದಕ್ಕೆ ನಾನು ನಿಪಿ-6 ಕ್ಕೆ ಸಹಿ ಮಾಡಿದ್ದು , ಅದರಲ್ಲಿ ಏನು ಬರೆಯಲಾಗಿದೆ ಎಂಬುದು ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

11. ಆರೋಪಿತರು ಯಾರು ಎಂಬುದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಅವರ ಹೆಸರು ಗೊತ್ತಿಲ್ಲ ಎಂದು ಹೇಳುತ್ತಾರೆ.

12. ಪೋಲಿಸರು ಅಮಾನತ್ತು ಪಡಿಸಿಕೊಂಡ ವಾಹನ ಯಾರದ್ದು ಎಂದು ನನಗೆ ಗೊತ್ತಿಲ್ಲ.

13. ನನಗೆ ಮುಮಾ-1 ಚಾಕು ಯಾರು , ಯಾರಿಗೆ ಹಾಕಿದರು ಎಂಬುದರ ಬಗ್ಗೆ ಮಾಹಿತಿ ಇಲ್ಲ.

14. ಪಂಚನಾಮೆಯನ್ನು ಬರೆಯಲು ನಾನು ಮಾಹಿತಿ ಕೊಟ್ಟಿಲ್ಲ.

15. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನ ಮೇಲೆ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೇ. ಸರಿ ಇದೆ.**

( ಅಶ್ವಿನಿ ವಿಜಯ ಶಿರಿಯಣ್ಣವರ )

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಎಫ್.ಟಿ. ಎಸ್. ಸಿ.–1, ಹಾವೇರಿ .